## (ಹಿಂದಿನ ಸಂಚಿಕೆಯಿಂದ)

ಲಿಫ್ಟಿಗಾಗಿ ಹಾದಿ ಕಾಯುವ ತಾಳ್ಮೆ ಇಲ್ಲದೇ ಮೆಟ್ಟಲುಗಳಿಂದಲೇ ಕೆಳಗೆ ಸಾಗಿದವನ ಹೆಜ್ಜೆಗಳ ಸದ್ದು ಹಾಲಿನಲ್ಲಿ ಉಸಿರು ಬಿಗಿ ಹಿಡಿದು ಕೂತಂತೆ ಕೂತವರಿಗೆ, ಬಹಳ ಕೆಳಗೆ ಹೋಗುವವರೆಗೂ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಎಡವಿ ಬೀಳದಿದ್ದರೆ ಸಾಕು. ಇಂಥ ಉತಾವಳಿಗೆ ಕಾರಣವಾಗಿರಬಹುದಾದ ಅನಾಹುತ ಅದೆಂತಹದೋ! ತಾವೇ ತಿಳಿಯುವ, ಧೋಂಡೂನಿಂದ ತಿಳಿಯುವುದಕ್ಕೆ ಕಾಯುವ ಬಲ ಹಾಲಿನಲ್ಲಿ ಕೂತ ಒಬ್ಬರಿಗೂ ಇರಲಿಲ್ಲ, ಧೋಂಡೂ ತಿರುಗಿ ಬಂದು ತಿಳಿಸುವ ತನಕ ಮಾತನಾಡುವುದು ಕೂಡ ಸಾಧ್ಯವಿಲ್ಲ ಎನ್ನುವ ಹಾಗೆ ತುಟಿಪಿಟ್ಟೆನ್ನದೇ ಕುಳಿತರು.

ಚಿತ್ತಕ್ಕೆ ಭ್ರಮೆ ಹಿಡಿಸುವ ಸನ್ನಿವೇಶವೇ ಆಗಿದ್ದರೂ ಮೂರು ತಾಸು ಸತತವಾಗಿ ಬದುಕಿನ ಬಗೆಗೇ ಮಾತನಾಡಿದ ಮೂವರನ್ನೂ ಈಗ ಅನಿರೀಕ್ಷಿತವಾಗಿ ಇದಿರಾದ ಸಾವಿನ ಪ್ರತಿಮೆಗಳು ಧೃತಿಗೆಡಿಸಿದವು. ತಮಗೇ ಗೊತ್ತಿಲ್ಲದೇ ಮೂವರೂ ಧೋಂಡೂ ಹಿಂತಿರುಗಿ ಬಂದುದರ ಇಷಾರೆಗಾಗಿ ಕಾಯುತ್ತ ಧ್ಯಾನಮಗ್ನರಾದವರಂತೆ ಕುಳಿತಿದ್ದರು. ಮನೆಯ ಹೆಬ್ಬಾಗಿಲ ಮಗ್ಗಲಲ್ಲೇ ಲಿಫ್ಟಿನ ಬಾಗಿಲು, ಲಿಫ್ಟ್ ಏಳನೇ ಮಜಲೆಗೆ ಬರುತ್ತಲೇ ಸದ್ದು ಕೇಳಿಸತೊಡಗಿದಾಗ, ''ಪಾರ್ವತೀ'' ಎಂದು ಅಡುಗೆಯ ಹೆಂಗಸನ್ನು ಕರೆದ, ಜಮಶೇದ್. ಅವಳು ಹಾಲಿಗೆ ಬಂದಕೂಡಲೇ ಫ್ರೇನಿ – ''ಕದ ತೆರೆ, ಧೋಂಡೂ ಬಂದ ನೋಡು'' ಎಂದಳು. ಧೋಂಡೂ ಹೊರಗೆ ಹೋದದ್ದೇ ಗೊತ್ತಿಲ್ಲದ ಪಾರ್ವತಿ ತಬ್ಬಿಬ್ಬಾಗಿ ನೋಡುತ್ತಿರುವಾಗ ಲಿಫ್ಟ್ ಎಂಟನೇ ಮಜಲೆಗೆ ಬಂದು ಮುಟ್ಟಿದ ಸದ್ದು ಕೇಳಿಸಿತು. ಲಿಫ್ಟಿನ ಕದ ತೆರೆದ ಸದ್ದೂ ಕೇಳಿಸಿ ಪಾರ್ವತಿ ಕದದ ಕಡೆಗೆ ಧಾವಿಸುವಷ್ಟರಲ್ಲಿ ಕರೆಗಂಟೆ, ಅದನ್ನು ಬಾರಿಸಿದವರು ಬಯಸಿದ್ದಕ್ಕಿಂತ ದೊಡ್ಡದಾಗಿ, ತುಸು ದೀರ್ಘವಾಗಿ ಕಿರುಚಿತು. ಆ ಹೊತ್ತಿಗಾಗಲೇ ಸೋಫಾದಲ್ಲಿ ಕೂತ ಮೂವರೂ ವೃದ್ಧಜೀವಿಗಳು ಎದ್ದು ನಿಂತಿದ್ದರು. 'ಪಾವರ್ತಿ ಕದ ತೆರೆದ ಕೂಡಲೇ ಒಬ್ಬೊಬ್ಬರೇ ಆಗ ಒಳಗೆ ಬರತೊಡಗಿದವರನ್ನು ಥಕ್ಕಾಗಿ ಕಣ್ಣರಳಿಸಿ ನೋಡುತ್ತ ಉಳಿದರು. ಎಲ್ಲರಿಗಿಂತ ಮುಂದೆ ಬಂದವನೇ ಯುನಿಫಾರ್ಮ್‌ನಲ್ಲಿದ್ದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ – ಈ ಮನೆಗೆ ತೀರ ಪರಿಚಿತನಾದ – ಬಬನ್ ಜಾಧವನಾಗಿದ್ದ. ಅವನ ಹಿಂದೆಯೇ ರಾವ್‌ಜೀಭಾಯಿಯ ಇಬ್ಬರೂ ಗಂಡುಮಕ್ಕಳು – ಅವರ ಹೆಂಡಂದಿರು ಎಲ್ಲರಿಗೂ ಹಿಂದೆ, ಇವರೆಲ್ಲರನ್ನೂ ಕರಕೊಂಡು ಬಂದ ಧೋಂಡೂ!

''ಅಪ್ಪಾ, ನೀನು ಇಲ್ಲಿ! ನಿನ್ನನ್ನು ಎಲ್ಲೆಲ್ಲಿ ಹುಡುಕಿ...'' ರಾವ್‌ಜೀಭಾಯಿಯ ಮಗನಿಗೆ ಇಷ್ಟು ಹೇಳುವುದರಲ್ಲಿ ಕೊರಳು ಬಿಗಿದು ಬಂತು. ಅವನ ತಮ್ಮ, ''ಅಣ್ಣ, ಅಪ್ಪನನ್ನು ನೀನು ಕರೆದುಕೊಂಡು ಬಾ. ನಾವು ಕೂಡಲೇ ಅಮ್ಮನಿದ್ದಲ್ಲಿಗೆ ಹೋಗುತ್ತೇವೆ. ಎಷ್ಟೊಂದು ಕಂಗಾಲಾಗಿ ಕುಳಿತಿದ್ದಾಳೋ'' ಎಂದು ಎಲ್ಲರಿಗೂ ನಮಸ್ಕಾರ ಮಾಡಿ, ಹೆಂಡತಿ ಹಾಗೂ ಅತ್ತಿಗೆಯೊಂದಿಗೆ ಅಲ್ಲಿಂದ ಹೊರಟುನಿಂತ. ಹೋಗು ಹೋಗುವಾಗ ಡಾಯನಿಂಗ್ ಟೇಬಲ್ ಬಳಿ ಸಂಕೋಚದಿಂದ ಮೈ ಮುದುಡಿ ನಿಂತ ಧೋಂಡೂನತ್ತ ಕೃತಜ್ಞತೆ ಸೂಚಿಸುತ್ತ ಕೈಬೀಸಿದ.